**ಅಸಲು ದಾವಾ ಸಂಖ್ಯೆಃ 12/2016**
**ಪಿಡಬ್ಲ್ಯೂ -1**

<u>ದಿನಾಂಕಃ ***18-07-2018*** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರವರಿಂದ</u>

ಪ್ರತಿವಾದಿ ಕುಟುಂಬಕ್ಕೆ ಗೊಪಾಲ್ ಗ್ರಾಮದಲ್ಲಿ ದಾವಾ ಆಸ್ತಿ ಬಿಟ್ಟು ಸರ್ವೆ ನಂ. ***48/1*** ರಲ್ಲಿ ***2*** ಎಕರೆ ***11*** ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ. ***67/7*** ಪಿ***4*** ರಲ್ಲಿ ***3*** ಎಕರೆ ***4*** ವರೆ ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಸರ್ವೆ ನಂ. ***48/1*** ರಲ್ಲಿ ಮಾತ್ರ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ಸರ್ವೆ ನಂ. ***67/***ಪಿ***4*** ರಲ್ಲಿ ತರಿ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿ ಮತ್ತು ಅವರ ಕುಟುಂಬದವರು ಹಿಂದಿನಿಂದಲೂ ಅಡಿಕೆ ಫಸಲನ್ನು ಕೊಟ್ಟು ಹಣವನ್ನು ಮುಂಗಡವಾಗಿ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅಡಿಕೆ ಫಸಲನ್ನು ಪಡೆದ ನಂತರ ವ್ಯತ್ಯಾಸದ ಹಣಕ್ಕೆ ಕರಾರನ್ನು ಮಾಡಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ನನಗೆ ಸಿದ್ದಿಪುರ ಗ್ರಾಮದ ಎಸ್ ಮಂಜುನಾಥ ನನಗೆ ಗೊತ್ತಿಲ್ಲ. ಪ್ರತಿವಾದಿಯು ಮಂಜುನಾಥ ಇವರಿಂದ ಹಣ ಪಡೆದುಕೊಂಡು ಕರಾರು ಪತ್ರ ಬರೆದುಕೊಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಕರಾರು ಪತ್ರ ರಿಜಿಸ್ಟರ್ ಅಗಿದ್ದು ಹಣ ತೀರುವಳಿ ಆದ ನಂತರ ಸದರಿ ಮಂಜುನಾಥ ಕರಾರು ಪತ್ರವನ್ನು ರದ್ದು ಮಾಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಬಾರಂದೂರು ರಮೇಶರವರಿಂದ ಪ್ರತಿವಾದಿ ಹಣ ಪಡೆದ ನಂತರ ಕರಾರು ಪತ್ರ ಬರೆದುಕೊಟ್ಟದ್ದು ಹಣ ತೀರುವಳಿಯಾದ ನಂತರ ಕ್ರಯ ಪತ್ರ ರದ್ದುಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ತರೀಕೆರೆಯ ಅಜ್ಜಪ್ಪನ ಮಗ ಎ ಗೋವಿಂದ ಇವರು ದಾವಾ ಆಸ್ತಿಯ ಬಗ್ಗೆ ಹಣ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ದಿ ***18-06-2015*** ರಲ್ಲಿ ದಾವಾ ಆಸ್ತಿಯ ಬಗ್ಗೆ ಪ್ರತಿವಾದಿಯು ಸದರಿ ಗೊವಿಂದಪ್ಪ ಇವರಿಗೆ ಹಣದ ಖಾತ್ರಿಯ ಬಗ್ಗೆ ಕರಾರು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗೊವಿಂದಪ್ಪ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂ. ***70/2015*** ನ್ನು ಹಾಕಿದ್ದು ನಂತರ ಅದರಲ್ಲಿ ಪ್ರತಿವಾದಿಯು ಗೊವಿಂದಪ್ಪ ರಾಜಿಯಾದ ಬಗ್ಗೆ ನನಗೆ ಗೊತ್ತಿಲ್ಲ.

ಪ್ರತಿವಾದಿ ಮತ್ತು ಅವರ ಕುಟುಂಬದವರು ಸುಮಾರು ವರುಷಗಳಿಂದ ನನ್ನ ಮತ್ತು ನಮ್ಮ ಕುಟುಂಬದ ಕಡೆಯಿಂದ ಸಾಲ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಇಬ್ಬರು ಮಕ್ಕಳು ಓದುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯು ತನ್ನ ಮಕ್ಕಳ ವಿದ್ಯಾಭ್ಯಾಸ ಮತ್ತು ಜಮೀನಿನ ಅಬಿವೃದ್ಧಿಗಾಗಿ ಸಾಲ ಪಡೆದು ಸಾಲದ ತೀರುವಳಿಗಾಗಿ ಅಡಿಕೆ ಫಸಲನ್ನು ನನಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಹಣದ ಸಲುವಾಗಿ ಕರಾರು ಪತ್ರವನ್ನು ಬರೆಸಿಕೊಳ್ಳುತ್ತಿದ್ದೇವು ನಂತರ ಫಸಲು ಬಂದ ನಂತರ ಬಾಕಿ ಹಣಕ್ಕೆ ಹಳೆ ಕರಾರನ್ನು ವಾಪಸ್ಸು ನೀಡಿ ಹೊಸ ಕರಾರನ್ನು ಬರೆಸಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಕರಾರು ಮಾಡಿಕೊಂಡಾಗ ಜೆರಾಕ್ಸ ಪ್ರತಿಯನ್ನು ಪ್ರತಿವಾದಿಗೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ.

ಪ್ರತಿವಾದಿಯರು ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಇಚ್ಚೆ ಹೊಂದಿರಲ್ಲಿವೆಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಕರಾರು ಪತ್ರವನ್ನು ಬರೆಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಮೇಲೆ ಹೇಳಿದ ***2*** ಜಮೀನು ಬಿಟ್ಟು ಪ್ರತಿವಾದಿಗಳಿಗೆ ಬೇರೆ ಯಾವ ಜಮೀನು ಇಲ್ಲದೇ ಇರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಜಮೀನು ಮತ್ತು ಮತ್ತೇರಡು ಜಮೀನುಗಳ ಆದಾಯದಿಂದಲೇ ಅವರ ಜೀವನ

ನಿರ್ವಹಣೆ ಆಗುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಆದಾಯವು ಅವರ ಜೀವನಕ್ಕೆ ಸಾಕಾಗುವುದಿಲ್ಲವೆಂದರೆ ಸರಿಯಲ್ಲ. ಆ ಕಾರಣದಿಂದ ಪ್ರತಿವಾದಿಯು ಮೊದಲಿನಿಂದಲು ನಮ್ಮ ಕಡೆಯಿಂದ ಸಾಲ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಈ ದಾವಾ ಜಮೀನು ಬ್ಯಾಂಕಿಗೆ ಆಧಾರವಾಗಿದೆ ಎಂದರೆ ಸರಿ. ನಾನು ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)***

**ಓ ಹೇ ಕೇ ಸ ಇ ಎ ಒ**

Sd/-

***(ಗಂಗಾಧರ ಚನ್ನಬಸಪ್ಪ ಹಡಪದ)***
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ತರೀಕೆರೆ**